[Govt. of Karnataka C.R.P. 67]

| |
|---|
| Deposition Sheets (RP.No.57) Form No.4 |

**IN THE COURT OF PRL. CIVIL JUDGE & J.M.F.C., KARKALA.**

**Criminal Case No. 356/2023**

ಪಿ.ಡಬ್ಲ್ಯು : 10 ಸಿ.ಡಬ್ಲ್ಯು : 8

ಸಾಕ್ಷಿದಾರನ ಹೆಸರು : ರಾಜೇಶ್ ಕೋಟ್ಯಾನ್

ತಂದೆಯ ಹೆಸರು : ಸೀನಾ ಪೂಜಾರಿ

ಪ್ರಾಯ : 56 ವರ್ಷ

ಉದ್ಯೋಗ : ಡ್ರೈವರ್

ವಾಸ : ಸಾಣೂರು

ದಿನಾಂಕ 27-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸಹಾಯಕ ಸರ್ಕಾರಿ ಅಭಿಯೋಜಕರು:-**

ಚಾಸಾ 1 ಮತ್ತು ಚಾಸಾ 9 ರವರ ಪರಿಚಯ ಇರುವುದಿಲ್ಲ. ಸುಮಾರು 3 ವರ್ಷಗಳ ಹಿಂದೆ ಅಪಘಾತ ವಿಚಾರವಾಗಿ ಕಾರ್ಕಳ ತಾಲೂಕು ಕಸಬ ಗ್ರಾಮದ ಕರಿಯಕಲ್ಲಿಗೆ ಬರುವಂತೆ ಪೋಲಿಸರು ಕರೆ ಮಾಡಿ ತಿಳಿಸಿರುತ್ತಾರೆ. ಅದರಂತೆ ನಾನು ಸದರಿ ಸ್ಥಳಕ್ಕೆ ಹೋಗಿದ್ದು ಅಲ್ಲಿ ಪೋಲಿಸರು ನನ್ನ ಹಾಗೂ ಇತರ ವ್ಯಕ್ತಿಗಳ ಸಮಕ್ಷಮ ಸಂಜೆ ತಕ್ಷೀರು ಸ್ಥಳ ಮಹಜರು ಮಾಡಿ, ನಕಾಶೆ ತಯಾರಿಸಿ, ಭಾವಚಿತ್ರ ತೆಗೆದು ತಕ್ಷೀರಿಗೆ ಸಂಬಂಧಿಸಿದ ಆಟೋ ರಿಕ್ಷಾ ಮತ್ತು ಬೈಕ್, ಹೆಲ್ಮೆಟ್ ಅನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ ಹಾಗೂ ಸದ್ರಿ ದಾಖಲೆಗಳಿಗೆ ನನ್ನ ಸಹಿ ಪಡೆದಿರುತ್ತಾರೆ.

ಸಾಕ್ಷಿಯು ತಕ್ಷೀರು ಸ್ಥಳ ಮಹಜರು ಹಾಗೂ ನಕಾಶೆಯಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದು, ಸದ್ರಿ ಮಹಜರನ್ನು ಈಗಾಗಲೇ ನಿಪಿ-2 ಎಂದು, ನಕಾಶೆಯನ್ನು ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಡಿ) ಮತ್ತು 3(ಡಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ರಿಂದ 12 ಭಾವಚಿತ್ರಗಳನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀ ಸವಾಲು</u> : ಆರೋಪಿ ಪರ : ಶ್ರೀ ಆರ್ ಎಸ್ ವಕೀಲರಿಂದ ಃ

ನನ್ನ ಸಮಕ್ಷಮ ಪೋಲಿಸರು ಸ್ಥಳ ಮಹಜರು ಮಾಡಿರುವುದಿಲ್ಲ ಹಾಗೂ ನಕಾಶೆ ತಯಾರಿಸಿರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ನನ್ನ ಸಮಕ್ಷಮ ಯಾವುದೇ ವಾಹನಗಳನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ದಾಖಲೆಗಳಿಗೆ ನಾನು ಠಾಣೆಯಲ್ಲಿ ಸಹಿ ಹಾಕಿರುತ್ತೇನೆ ಎಂದರೆ ಸರಿಯಲ್ಲ. ಮೃತ ರಿಕ್ಷಾ ಚಾಲಕ ವಿಜಯ ಶೆಟ್ಟಿ ರವರ ಕುಟುಂಬಕ್ಕೆ ವಿಮಾ ಪರಿಹಾರ ಸಿಗಲ್ಲಿ ಎಂದು ಪೋಲಿಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ, ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ